ಇದ್ದಕ್ಕಿದ್ದಂತೆ ಬಂದ ಬಂಡುಪದಗಳಿಗೆ ಅಲ್ಲಿದ್ದವರ ಕಿವಿಗಳು ಚುರುಕಾದವು. ಮತ್ತೆ ಕೆಲವರಿಗೆ ಗಾಬರಿಯಾದರೂ, 'ಇರಲೇಳು ನಮ್ಮ ಸಂಪ್ರದಾಯ ತಾನೆ' ಎಂಬ ನೆಪದೊಂದಿಗೆ ಮೈ ನಚ್ಚಗಾಗಿಸೋ ಪದಗಳನ್ನು ಕೇಳುವ ಅವಕಾಶ ಸಿಕ್ಕ ಒಳಗೊಳಗೇ ಖುಷಿಯಾದರು. ಇಂತಾ ಪದಗಳನ್ನು ಎಂದೂ ಕೇಳಿಲ್ಲದ ಕೆಲವು ಇತ್ತೀಚಿನ ಹೆಂಗಸರು ಕಕ್ಕಾವಿಕ್ಕಿಯಾದರು. ಹನುಮಂತಣ್ಣ ಮಾತ್ರ ತಾನೇ ತಾನಾದವನಂತೆ ಪದಗಳನ್ನು ಮುಂದುವರಿಸಿದ. ಸುಮಾರು ಹೊತ್ತಿನವರೆಗೆ ಮೈಮರೆತು ಹಾಡುತ್ತಲೇ ಇದ್ದ.

ಹನುಮಂತಣ್ಣನ ವಯಸ್ಸು ಈಗ ಐವತ್ತೋ ಅರವತ್ತೋ ಇರಬೈದು. ಆದರೆ ಬಂಡುಹಾಡನ್ನು ಶುರು ಮಾಡಿದಾಕ್ಷಣ ಮೂವತ್ತರ ಹರೆಯದವನಾಗಿಬಿಡುತ್ತಾನೆ. ಹೀಗೆ ಅವನ ವಯಸ್ಸು ಅರವತ್ತು ಮೂವತ್ತರ ನಡುವೆ ಜೋಕಾಲಿಯಾಡುತ್ತಾ ಇದೆ. ಸುಮಾರು ನಲವತ್ತು ವರುಷಗಳಿಂದ ಅಮ್ಮನ ಆಸಾದಿ ಆಗಿ ಹಲಗೆ ಹಿಡಿಯುತ್ತ ಅಮ್ಮನನ್ನು ಹೊಗಳುತ್ತ ಬಂಡುಹಾಡುಗಳನ್ನು ಹಾಡುತ್ತ ತನ್ನ ಆಯಸ್ಸಿನ ಮುಕ್ಕಾಲು ಭಾಗ ಕಳೆದಿದ್ದಾನೆ. ಆಗಾಗ್ಗೆ ಊರಾಡಲು ಕಡ್ಲೆಮಗೆ, ದೋಣನಕಟ್ಟೆ, ಮಾಡಾಳು, ಮುಂತಾದ ಊರುಗಳಿಗೆ ಹೋಗಿ ಯಾರ ಮನೆ ಮುಂದಾದರೂ ಹನುಮಂತಣ್ಣ ಹಲಗೆಯನ್ನು ತಮ ತಮ ಅನ್ನಿಸುವುದೇ ತಡ, ಹೆಣ್ಣು ಮಕ್ಕಳು ತಡಮಾಡದೆ ಅಕ್ಕಿಯೋ ಜೋಳವೋ ರಾಗಿಯೋ ಏನಾದರೊಂದನ್ನು ಕೊಟ್ಟು ಬೇಗ ಕಳಿಸಿಬಿಡುತ್ತಿದ್ದರು. ಕೆಲವು ತಲೆಮಾಸಿದ ಹದಿ ಹರೆಯದ ಹುಡುಗರು ಊರ ಹೊರಗಿನ ತೋಪಿನಲ್ಲಿ ಹನುಮಂತಣ್ಣನಿಗೆ ಶರಾಪಿನ ಆಸೆ ತೋರಿಸಿ ತಮಗೆ ಬೇಕೆನಿಸುವಷ್ಟು ಬಂಡುಪದಗಳನ್ನು ಕೇಳುತ್ತಿದ್ದುದೂ ಉಂಟು. ಆಗೆಲ್ಲ ಅದನ್ನು ಕಂಡ ಹಿರೀಕರು ಕಂಡರೂ ಕಾಣದ ಹಾಗೆ ಆ ಕಡೆಗೆ ಕತ್ತು ಹಾಕದೆ ಕಿವಿ ಮಾತ್ರ ಹಾಕುತ್ತ ಹೋಗಿ ಬಿಡುತ್ತಿದ್ದರು. ಅವನ ಬಂಡುಪದಗಳಿಗೆ ಒಂದು ವಿಶೇಷ ಗುಣವಿತ್ತು. ಅತಿರಂಜಿತ ಅಶ್ಲೀಲ ಎಂದು ಮೊದಮೊದಲಿಗೆ ಅನ್ನಿಸಿದರೂ ಕೇವಲ ಐದಾರು ನಿಮಿಷಗಳಲ್ಲೇ ಕೇಳುತ್ತಿದ್ದವರು ಅಂತಹ ತಾರತಮ್ಯವನ್ನೇ ದಾಟಿ ಬಿಡುತ್ತಿದ್ದರು. ಆಮೇಲೆ ಯಾರಿಗೂ ಅವು ಸಮಸ್ಯೆ ಮಾಡುತ್ತಿರಲಿಲ್ಲ. ಬದಲಿಗೆ ಅಂತಾ ಮುಜುಗರವನ್ನು ದಾಟಲು ಅವುಗಳನ್ನೇ ಬಳಸಬಹುದು ಎಂಬುದು ಗೊತ್ತಾಗುತ್ತಿತ್ತು. ಅವುಗಳನ್ನು ಶುರುಮಾಡಿದಾಗ ತಕ್ಷಣಕ್ಕೆ, ಸಂಭೋಗಕ್ಕೆ ಸಂಬಂಧಿಸಿದ ಅದೂ ತಾವು ಪೂಜಿಸುತ್ತಿರುವ ಅಮ್ಮನನ್ನೇ ಕುರಿತಾಗಿ ಇರುವ ಪದಗಳೆಂದು ಗೊತ್ತಾಗುತ್ತಿತ್ತು. ಅಂತವುಗಳನ್ನು ಎಂದೂ ಕೇಳಿಲ್ಲದ ಹೊಸ ಹುಡುಗ ಹುಡುಗಿಯರು ಅವುಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೆ ಪರದಾಡುತ್ತಿದ್ದರೆ, ನಡುಹರಯದ ಅನುಭವಿ ಗಂಡಸರು ಮೀಸೆ ಮರೆಯಲ್ಲೆ ನಗುತ್ತಿದ್ದರು. ಹೆಂಗಸರು ಸೆರಗಿನ ಮರೆಯಲ್ಲಿ ಅದೇನನ್ನು ಪ್ರತಿಕ್ರಿಯಿಸುತ್ತಿದ್ದರೋ ಅದು ಯಾರಿಗೂ ತಿಳಿಯುತ್ತಿರಲಿಲ್ಲ. ಎಲ್ಲ ಮೊದಮೊದಲಿನ ಸ್ವಲ್ಪ ಹೊತ್ತಿನ ಪರದಾಟ ಅಷ್ಟೆ. ಐದಾರು ಬಂಡುಪದಗಳನ್ನು ಹಾಡಿದ ಮೇಲೆ ಎಲ್ಲವೂ ನಿರಾಳವೆನ್ನಿಸಿಬಿಡುತ್ತಿತ್ತು. ಅಷ್ಟೇ ಅಲ್ಲ ತಮ್ಮ ಮೊದಲ ಪ್ರತಿಕ್ರಿಯೆಯ ಬಗೆಗೆ ಅವರಿಗೇ ಆಶ್ಚರ್ಯವೆನ್ನಿಸುತ್ತಿತ್ತು. ಇದೆಲ್ಲ ಲೋಕದಲ್ಲಿ ನಿತ್ಯ ಇರುವುದೇ ಅಲ್ಲವೆ ಅಂತಾ ಅನ್ನಿಸಿಬಿಡುತ್ತಿತ್ತು.

ಆಸಾದಿ ಹನುಮಂತಣ್ಣನಿಗೆ ತುಂಬಾ ದಿನಗಳಿಂದ ಬಂಡುಪದಗಳನ್ನು ಹಾಡದೆ ಬಾಯೆಲ್ಲ ಸಪ್ಪೆ ಸಪ್ಪೆ ಅಂತಾ ಅನ್ನಿಸಲಿಕ್ಕೆ ಸುರುವಾಗಿತ್ತು. ಯಾಕೋ ಮೊದಲಿನ ಹಾಗೆ ಯಾರೂ ಬಂಡುಹಾಡನ್ನು ಹಾಡಲು ಒತ್ತಾಯಿಸುವವರೂ ಇಲ್ಲ. ಮೊದಲಾದರೆ ವರಗಲ ಗುಡಿಯ ಮುಂದೆ ಮಂಗಳವಾರ ಶುಕ್ರವಾರ ಪೂಜೆಗೆ ಹಲಗೆ ಹಿಡಿಯುತ್ತಿದ್ದ ಹನುಮಂತಣ್ಣ ಸ್ವಲ್ಪ ಹೊತ್ತು ಅಮ್ಮನ ಹೊಗಳಿಕೆ ಪದಗಳನ್ನು ಹಾಡಿದವನು ನಂತರ ಬಂಡುಪದಗಳನ್ನು ಎತ್ತಿಕೊಂಡು ಬಿಡುತ್ತಿದ್ದ. ಹಣ್ಣುಕಾಯಿ ಮಾಡಿಸಲು ಬಂದಿರುತ್ತಿದ್ದವರಲ್ಲಿ ಹೆಣ್ಣುಮಕ್ಕಳು ಇದ್ದರೆ, ಅವರು ಸೆರಗಿನ ಮರೆಯಲ್ಲಿ ಮುಸಿ ಮುಸಿ ನಗುತ್ತ ಬೇಗ ಜಾಗ ಖಾಲಿ ಮಾಡುತ್ತಿದ್ದರು. ಇನ್ನು ಜಾತ್ರೆ ಉತ್ಸವಗಳಲ್ಲಿಯಂತೂ